ರವೀಂದ್ರನಾಥ ಠಾಗೋರ್ ಜಯಂತಿ ೨೦೨೨–೨೩

ಹುಬ್ಬಳ್ಳಿ: ಸ್ಥಳೀಯ ಕೆ.ಎಲ್.ಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಶಿಕ್ಷಣ ವಿಭಾಗ ವಿದ್ಯಾನಗರ ಹುಬ್ಬಳ್ಳಿಯಲ್ಲಿ ರವೀಂದ್ರನಾಥ ಠಾಗೋರ್ ಜಯಂತಿ ದಿನಾಂಕ: ೦೭/೦೫/೨೦೨೨ ರಂದು ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಡಾ. ರವೀಂದ್ರನಾಥ ಠಾಗೋರ್ ಅವರ ಜನ್ಮದಿನಾಚಾರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವು ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿ ಪದ್ಮ ಕಾಂಬ್ಳೆ ಅವರ ಪ್ರಾರ್ಥನೆಗೀತೆಯೊಂದಿಗೆ ಪ್ರಾರಂಭವಾಯಿತು. ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿ ಶ್ರೀದೇವಿ ಅವರು ಕಾರ್ಯಕ್ರಮಕ್ಕೆ ಎಲ್ಲರನ್ನೂ ಸ್ವಾಗತಿಸಿದರು. ಈ ಕಾರ್ಯಕ್ರಮದ ಅಂಗವಾಗಿ ಭಾಷಣ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಮ್ಮ ಕಾಲೇಜಿನ ಪ್ರಾಚಾರ್ಯರಾದ ಡಾ. ಲಿಂಗರಾಜ.ಸಿ.ಮುಳ್ಳಳ್ಳಿ ವಹಿಸಿದ್ದರು. ಹಾಗೆಯೇ ಭಾಷಣ ಸ್ಪರ್ಧೆಯ ನಿರ್ಣಯಕ ಸ್ಥಾನವನ್ನು ಡಾ. ಲಕ್ಷ್ಮೀ ಭಾಯಿ ಜಾಧವ್ ಹಾಗೂ ಪ್ರಿಯಾ ಬಿಳಗಿ ಅವರು ವಹಿಸಿದ್ದರು. ಅಶ್ವಿನಿ, ಕನಕಪ್ಪ, ಹುಳಿಗೆವ್ವ, ವಿಜಯಲಕ್ಷ್ಮಿ , ಶ್ರೀದೇವಿ, ಮಧು ನಡುವಿನಮನಿ, ಮಾಳಪ್ಪ, ಪವನ್ ಕುಮಾರ್, ಉಮೇಶ್, ಪವನ್ ಕುಮಾರ್ ಅವರು ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿದರು. ರವೀಂದ್ರನಾಥ ಟ್ಯಾಗೋರ್ ಅವರು ನಿಸರ್ಗವಾದಿಗಳಾಗಿದ್ದರು ಮತ್ತು ನಿಸರ್ಗದ ಮಧ್ಯೆ ಕಲಿಯುವ ಶಿಕ್ಷಣವೇ ಮಹತ್ವವಾದದ್ದು ಎಂಬುದು ರವೀಂದ್ರನಾಥ ಟ್ಯಾಗೋರ್ ಅವರ ಚಿಂತನೆಯಾಗಿತ್ತು ಎಂದು ಪ್ರಾಚಾರ್ಯರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದರು, ಕೊನೆಯದಾಗಿ ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀಕಾಂತ್ ಹಡಪದ ಅವರು ನೆರವೇರಿಸಿದರು, ಕಾರ್ಯಕ್ರಮದಲ್ಲಿ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂಧಿ ವರ್ಗದವರು ಹಾಗೂ ಪ್ರಥಮ ಮತ್ತು ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಹಾಜರಿದ್ದರು. ಈ ಕಾರ್ಯಕ್ರಮವನ್ನು ಪ್ರಶಿಕ್ಷಣಾರ್ಥಿಳು ಸಂಘಟಿಸಿ ನೇರವೇರಿಸಿಕೊಟ್ಟರು